# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ವಾರ್ಡ್ ನಂ. 177 ಜೆ.ಪಿ.ನಗರ ವಾರ್ಡ್ ಸಮಿತಿ ಸಭೆಯ ನಡಾವಳಿ**

ದಿನಾಂಕ 07-11-2020 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಪಿ ನಗರ ವಾರ್ಡ್ ಕಛೇರಿಯಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಹೆಚ್.ನಾಗರಾಜಪ್ಪ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ಸಭಾ ನಡಾವಳಿ

**ಹಾಜರಿದ್ದ ಸದಸ್ಯರು**

1. ಶ್ರೀ ಹೆಚ್.ನಾಗರಾಜಪ್ಪ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ,
2. ಶ್ರೀ ರಾಮು, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು,
3. ಶ್ರೀ ಕಲ್ಯಾಣ್ ಮೋಹನ್, ಕಿರಿಯ ಆರೋಗ್ಯ ಪರಿವೀಕ್ಷಕರು, ಮತ್ತು ಸದಸ್ಯರು.
4. ಶ್ರೀ ಉಮೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಲೆಕ್ಟ್ರಿಕಲ್ ಬಿಬಿಎಂಪಿ- ದಕ್ಷಿಣ
5. ಶ್ರೀ ಚಂದ್ರ ಶೇಖರ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
6. ಶ್ರೀ ರಾಕೇಶ್.ಎಸ್. ಕಂದಾಯ ವಸೂಲಿಗಾರರು
7. ಶ್ರೀ ಶ್ರೀನಿವಾಸ.ಎಸ್. ಕಂದಾಯ ವಸೂಲಿಗಾರರು
8. ಶ್ರೀ ಅರವಿಂದ್ ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್, ಜೆ.ಪಿ.ನಗರ,
9. ಶ್ರೀ ವಿಜಯ್ ಸಿ.ವಿ. ಮಾರ್ಷಲ್ಸ್
10. ಜೆ.ಪಿ.ನಗರದ ನಾಗರೀಕ ಕಲ್ಯಾಣ ಸಂಘದ ಸದಸ್ಯರುಗಳು

ಮಾನ್ಯ ಅಧ್ಯಕ್ಷರು, ಸ್ವಾಗತದೊಂದಿಗೆ ಅಧಿಕಾರಿಗಳು / ಹಾಜರಿದ್ದ ಸದಸ್ಯರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸಿದರು.

ಹಿಂದಿನ ಸಭೆಯ ನಡವಳಿಗಳನ್ನು ಓದಿ ಅನುಮೋದಿಸಲಾಯಿತು.

**ಕೋವಿಡ್ – 19 ಸಾಂಕ್ರಮಿಕ ರೋಗದ ಬಗ್ಗೆ:-**

1. ವಾರ್ಡ್ ನಂ. 177, ಜೆ.ಪಿ.ನಗರ ಇಲ್ಲಿ ಒಟ್ಟು 859 ಕೋವಿಡ್ – 19 ಪ್ರಕರಣಗಳಿದ್ದು, ಇದರಲ್ಲಿ 813 ರೋಗಿಗಳು ಗುಣಮುಖರಾಗಿದ್ದು, 29 ಸಕ್ರಿಯ ಪ್ರಕರಣಗಳಿದ್ದು 17 ಜನ ಮೃತಪಟ್ಟಿರುತ್ತಾರೆ.
2. ನೋಡಲ್ ಅಧಿಕಾರಿಗಳು ಮಾತನಾಡಿ ತಾತ್ಕಲಿಕ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸ್ಥಳಗಳಲ್ಲಿ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಹೆಚ್ಚಿನ ಪರೀಕ್ಷೆ ನಡೆಸುವಂತೆ ಸೂಚಿಸಿದರು.
3. ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಜನ ಜಾಗೃತಿ ಮೂಡಿಸಲು ಧ್ವನಿವರ್ದಕವಿರುವ ಆಟೋಗಳಲ್ಲಿ ಸಾಯಂಕಾಲ 5 ರಿಂದ 7 ಗಂಟೆಯವರೆಗೆ ಜನ ನಿಬಿಡ ಪ್ರದೇಶಗಳಲ್ಲಿ ಪ್ರಚಾರ ಮಾಡಲು ವ್ಯವಸ್ಥೆ ಮಾಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಘನ ತ್ಯಾಜ್ಯದ ಗುತ್ತಿಗೆದಾರರಿಗೆ ಸೂಚಿಸಿದರು. ಜೊತೆಗೆ ಬೀದಿ ಬದಿಗಳಲ್ಲಿ ತಳ್ಳುವಗಾಡಿ ಮತ್ತು ಇತರೆ ವಾಣಿಜ್ಯ ಚಟುವಟಿಕೆದಾರರಿಗೆ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಸೂಚಿಸಿದರು.

Scanned with CamScanner

4. ಮಾಸ್ಕ್ ಧರಿಸದೆ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾವಳಿಗಳನ್ವಯ ದಂಡ ವಿಧಿಸುವುದು ಮತ್ತು ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳುವಂತೆ ಮನವೊಲಿಸುವ ಕೆಲಸವನ್ನು ನಿರ್ವಹಿಸುವಂತೆ ಸೂಚಿಸಿದರು.

**ಸ್ವಚ್ಚತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ :-**

1. ವಾರ್ಡ್ ಸಂಖ್ಯೆ. 177 ರಲ್ಲಿ 17 ಆಟೋಗಳಿದ್ದು, 3 ಕ್ಯಾಂಪ್ಯಾಕ್ಟರ್‌ಗಳಿರುತ್ತವೆ. ಕಸ ವಿಂಗಡಣೆಯ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಲಾಗಿರುತ್ತದೆ. ಸಂಬಂಧಿಸಿದಂತೆ ಆರ್.ಡಬ್ಲ್ಯೂ.ಎ ಗಳನ್ನು ಮತ್ತು ಸ್ವಯಂ ಸೇವಕರುಗಳನ್ನು ಸಂಪರ್ಕಿಸಿ ಕಸ ವಿಂಗಡಣೆ ಮಹತ್ವ ಮತ್ತು ಅವಶ್ಯಕತೆ ಬಗ್ಗೆ ತಿಳುವಳಿಕೆ ಮಾಡಿಸಲಾಗುತ್ತಿದೆ. ವಾರ್ಡಿನಲ್ಲಿ ಎಲ್ಲಾ ಬ್ಲಾಕ್ ಸ್ಪಾಟ್‌ಗಳನ್ನು ಪರಿಶೀಲಿಸಿ ಕಸ ವಿಂಗಡಣೆ ಮಾಡಲು ಸಂಬಂಧಪಟ್ಟ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.
2. ವಾರ್ಡ್ ನಂ. 177 ರಲ್ಲಿರುವ ಎಲ್ಲಾ ಬ್ಲಾಕ್ ಸ್ಪಾಟ್‌ಗಳನ್ನು ಆಗಿಂದ್ದಾಗ್ಗೆ ತೆರವುಗೊಳಿಸಲು ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು ಹಾಗೂ ರಸ್ತೆ ಬದಿಗಳಲ್ಲಿ ಕಸ ಎಸೆಯುವವರನ್ನು ಪತ್ತೆ ಮಾಡಿ ದಂಡ ವಿಧಿಸಲು ಮಾರ್ಷಲ್‌ಗೆ ಸೂಚಿಸಲಾಯಿತು.

**ಕಾಮಗಾರಿ ವಿಭಾಗ :**

1. ಮಳೆಗಾಲ ಸಮಯದಲ್ಲಿ ರಸ್ತೆಯ ಮೇಲೆ ನೀರು ನಿಲ್ಲದಂತೆ ಮಳೆ ನೀರು ಸಾರಾಗವಾಗಿ ಹೋಗುವಂತೆ ಜಾಗವನ್ನು ಶುಚಿಯಾಗಿಡುವಂತೆ ಕ್ರಮ ಜರುಗಿಸುವುದು.
2. ಸಾರ್ವಜನಿಕರಿಂದ ಯಾವುದೇ ದೂರುಗಳು ಕಂಡುಬಂದಲ್ಲಿ ಕೂಡಲೇ ಸಹಕರಿಸಲು ಕ್ರಮಜರುಗಿಸಲು ಸೂಚಿಸಲಾಯಿತು.
3. ವಾರ್ಡ್ ಮಟ್ಟದಲ್ಲಿ ಹಾಲಿ ನಡೆಯುತ್ತಿರುವ ಕಾಮಗಾರಿಗಳ ವಿವರಗಳನ್ನು ಪಡೆದುಕೊಂಡು ಸಮರ್ಪಕವಾಗಿ ಕಾಮಗಾರಿಯನ್ನು ನಿರ್ವಹಿಸಲು ಸಭೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆ.ಪಿ.ನಗರ ಉಪ-ವಿಭಾಗ ರವರಿಗೆ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.
4. ಫುಟ್‌ಪಾತ್‌ಗಳಲ್ಲಿ ಅನಧಿಕೃತ ತಳ್ಳು ಗಾಡಿಗಳನ್ನು ತೆರವುಗೊಳಿಸಲು ಸೂಚಿಸಿದರು.

**ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ :-**

1. ಬೀದಿ ದೀಪಗಳ ನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಅಗಿಂದ್ದಾಗ್ಗೆ ಪರಿಹರಿಸಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರಿಗೆ ಸೂಚಿಸಲಾಯಿತು.

**ಕಂದಾಯ ವಿಭಾಗ:-**

1. ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ವಸೂಲಾತಿಗೆ ಮುಖ್ಯ ಆದ್ಯತೆ ನೀಡುವಂತೆ ಸಂಬಂಧಪಟ್ಟ ಕಂದಾಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
2. ಸಭೆಯ ದಿನಾಂಕದವರೆಗೂ 2020-21 ರ ವಾರ್ಷಿಕ ಅವಧಿಯಲ್ಲಿ ಒಟ್ಟು ನಿಗಧಿಪಡಿಸಿರುವ ವಸೂಲಾತಿ 18.22 ಕೋಟಿ, ಇದುವರೆವಿಗೂ ಆದ ವಸೂಲಾತಿ 14.45 ಕೋಟಿ ಉಳಿಕೆ 3.77 ಕೋಟಿಯನ್ನು ವಸೂಲಿ ಮಾಡಲು ಕ್ರಮ ವಹಿಸುತ್ತಿರುವುದಾಗಿ ಸಭೆಯಲ್ಲಿ ಕಂದಾಯ ವಸೂಲಿಗಾರರು ತಿಳಿಸಿದರು.

Scanned with CamScanner

**ತೋಟಗಾರಿಕೆ ಇಲಾಖೆ**

1. ಜೆ.ಪಿ.ನಗರ ವ್ಯಾಪ್ತಿಯ ಪಾರ್ಕಿನಲ್ಲಿ ಸ್ವಚ್ಚತಾ ಕಾರ್ಯ, ಉದ್ಯಾನವನದಲ್ಲಿ ಔಷಧಿ ಸಸಿಗಳನ್ನು ನೆಡಸಲು ಕ್ರಮ ಜರುಗಿಸುವಂತೆ ಹಾಜರಿದ್ದ ತೋಟಗಾರಿಕಾ ಪರಿವೀಕ್ಷಕರಿಗೆ ಸೂಚಿಸಿದರು.

**ಅರಣ್ಯ ಇಲಾಖೆ**

1. ಜೆ.ಪಿ.ನಗರ ವ್ಯಾಪ್ತಿಯ ಸುತ್ತಮುತ್ತಲಿನ ಪ್ರಧೇಶಗಳಲ್ಲಿ ಒಣಗಿದ ಮರದ ಕೊಂಬೆಗಳನ್ನು ಕತ್ತರಿಸಲು ಕ್ರಮ ಕೈಗೊಳ್ಳುವ ಬಗ್ಗೆ ಅರಣ್ಯ ಇಲಾಖೆಯವರಿಗೆ ಸೂಚಿಸಿದರು.

BWSSB

1. ಜೆ.ಪಿ.ನಗರ ವ್ಯಾಪ್ತಿಯ ಸುತ್ತಮುತ್ತಲಿನ ಪ್ರಧೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ನಿರ್ವಹಣೆಯನ್ನು ಸಾರ್ವಜನಿಕರಿಗೆ ತೊಂದರೆ ಆಗದಂತೆ ಸಮರ್ಪಕವಾಗಿ ನಿರ್ವಹಿಸಲು ಸೂಚಿಸಿದರು.

BESCOM

1. ವಾರ್ಡ್ ನಂ. 177 ರ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜು ಮಾಡಲು ಅಂಡರ್ ಗ್ರೌಂಡ್ ಕೇಬಲ್ ಕೆಲಸ ಪ್ರಗತಿಯಲ್ಲಿದ್ದು, ಶೇ. 70 ರಷ್ಟು ಕೆಲಸ ಮುಕ್ತಾಯಗೊಂಡಿದ್ದು, ಬಾಕಿ ಕಾಮಗಾರಿ ಕೆಲಸ ಮುಗಿದ ನಂತರ ವಿದ್ಯುತ್ ಸರಬರಾಜು ಬಗ್ಗೆ ಪರೀಕ್ಷಿಸಿದ ನಂತರ ಕೇಬಲ್‌ಗಾಗಿ ರಸ್ತೆಯಲ್ಲಿ ಅಗೆದಿರುವ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮವನ್ನು ಕೈಗೊಳ್ಳುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರು ಸಭೆಯಲ್ಲಿ ತಿಳಿಸಿದರು. ಅದರಂತೆ ಕ್ರಮವಹಿಸಲು ಸೂಚಿಸಲಾಯಿತು.

**ಇಂದಿರಾ ಕ್ಯಾಂಟೀನ್**

1. ವಾರ್ಡ್ ನಂ. 177 ರ ರಾಗಿಗುಡ್ಡ ಸ್ಲಂ ಪಕ್ಕದಲ್ಲಿರುವ ಫುಟ್‌ಪಾತ್ ನಲ್ಲಿ ಮೊಬೈಲ್ ಇಂದಿರಾ ಕ್ಯಾಂಟೀನ್‌ನಲ್ಲಿ ಸಾರ್ವಜನಿಕರಿಗೆ ಆಹಾರ ವಿತರಿಸುತ್ತಿದ್ದು, ಸದರಿ ಫುಟ್‌ಪಾತ್ ನ್ನು ಅಗೆದಿರುವುದು ಹಾಗೂ ಚರಂಡಿಯ ಸ್ಲ್ಯಾಬ್‌ಗಳು ಮುರಿದಿರುವುದರಿಂದ, ಅದನ್ನು ಸರಿಪಡಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆ.ಪಿ.ನಗರ ಉಪ-ವಿಭಾಗ ರವರಿಗೆ ಸೂಚಿಸಲಾಯಿತು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಹಾಗೂ ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಮಟ್ಟದ ವಿಪತ್ತು ನಿರ್ವಹಣಾ ಸಮಿತಿ
ವಾರ್ಡ್ ಸಂಖ್ಯೆ. 177, ಜೆ.ಪಿ.ನಗರ

Nagaraj - y
ಅಧ್ಯಕ್ಷರು ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ಮಟ್ಟದ ವಿಪತ್ತು ನಿರ್ವಹಣಾ ಸಮಿತಿ
ವಾರ್ಡ್ ಸಂಖ್ಯೆ. 177, ಜೆ.ಪಿ.ನಗರ

Scanned with CamScanner